# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಸುಭಾಷ್ ನಾಯ್ಕ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ ಇವರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ:- 1) ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. Compt/ BD/315/2010/ARE-6 ದಿನಾಂಕ. 03.11.2016.

2) ಮಾನ್ಯ ಉಪ ಲೋಕಾಯುಕ್ತ-2ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ Compt/ Uplok/ BD-315/2010/ARE-6 ದಿನಾಂಕ. 24.10.2016.

-----

ಪ್ರಸ್ತಾವನೆ

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 03.11.2016ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-2ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತ-2 ರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತ-2 ರವರು ಲೋಕಾಯುಕ್ತ ಕಾಯ್ದೆ ಕಲಂ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ವಿ.ಸಿ. ಪಾರ್ಶ್ವನಾಥ ತಂದೆ ಚನ್ನಯ್ಯಗೌಡ, ವಳಗೆರೆ, ತುಂಬ್ರಿ ಅಂಚೆ, ಕರೂರು ಹೋಬಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರು ಶ್ರೀ ವಿ.ಸಿ. ಪಾರ್ಶ್ವನಾಥ ತಂದೆ ಚನ್ನಯ್ಯಗೌಡ, ವಳಗೆರೆ, ತುಂಬ್ರಿ ಅಂಚೆ, ಕರೂರು ಹೋಬಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರು ಸಾಗರ ತಾಲ್ಲೂಕು, ತುಮರಿ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ್ಯ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಿ ಸರ್ಕಾರದ ಹಣವನ್ನು ಈ ಕೆಳಕಂಡ ಅಧಿಕಾರಿ/ನೌಕರರು ದುರುಪಯೋಗಪಡಿಸಿಕೊಂಡಿದ್ದಾರೆಂದು ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

1. ಕಾರ್ಯದರ್ಶಿ, ತುಮರಿ ಗ್ರಾಮ ಪಂಚಾಯತಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
2. ಶ್ರೀ ಸುಭಾಷ್ ನಾಯ್ಕ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ.

ಸದರಿ ದೂರಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಕಚೇರಿಯು ತನಿಖೆ ಕೈಗೊಂಡು ಸಲ್ಲಿಸಿರುವ ವರದಿಯಲ್ಲಿ ಈ ಕೆಳಕಂಡ ಅಂಶಗಳು ವ್ಯಕ್ತವಾಗುತ್ತವೆ:-

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ರವರು ದೂರಿನಲ್ಲಿ ಹೇಳಿದ ಆಪಾದನೆಗಳಿಗೆ ಸಂಬಂಧಿಸಿದಂತೆ ಶ್ರೀ ಪಿ.ಬಿ.ಬ್ಯಾನರ್ಜಿ, ಅರಣ್ಯ ಉಪ ಆಯುಕ್ತರು, ಸಾಮಾಜಿಕ ಅರಣ್ಯ ಶಿವಮೊಗ್ಗ ಇವರ ನೇತೃತ್ವದಲ್ಲಿ ರಚಿಸಲಾದ ತಂಡವು ತನಿಖೆ ಕೈಗೊಂಡು ಸಲ್ಲಿಸಿದ ತನಿಖಾ ವರದಿಯ ಅನುಸಾರ ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ 5 ಜನ ಆಪಾದಿತರಿಂದ ದುರುಪಯೋಗವಾದ ಮೊತ್ತವನ್ನು ವಸೂಲು ಮಾಡಲು ದಿ: 12.06.2013ರ ಆದೇಶದಲ್ಲಿ ಆದೇಶಿಸಿದ್ದು ವಿವರ ಈ ಕೆಳಕಂಡಂತಿದೆ:-

| ಕ್ರ. ಸಂ. | ಆಪಾದಿತರ ಹೆಸರು ಮತ್ತು ವಿವರ | ವಸೂಲು ಮಾಡ ಬೇಕಾಗಿರುವ ಮೊತ್ತ (ರೂ.ಗಳಲ್ಲಿ) |
|---|---|---|
| ಅ | ಶ್ರೀ ಸುರೇಶ್ ರಾವ್,<br>ಕಾರ್ಯದರ್ಶಿ, ತುಮರಿ ಗ್ರಾ.ಪಂ.<br>ಸಾಗರ, ಶಿವಮೊಗ್ಗ ಜಿಲ್ಲೆ | 1,23,008-00 |
| ಆ | ಶ್ರೀ ಸುಭಾಷ್ ನಾಯ್ಕ,<br>ಕಿರಿಯ ಅಭಿಯಂತರರು,<br>ಪಂಚಾಯಿತಿ ರಾಜ್ ಇಂಜಿನಿಯರಿಂಗ್<br>ಉಪ ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ | 80,046-00 |
| ಇ | ಶ್ರೀ ಶಿವಮೂರ್ತಿ,<br>ಹಿಂದಿನ ವಲಯ ಅರಣ್ಯ ಅಧಿಕಾರಿ,<br>ಸಾಗರ, ಶಿವಮೊಗ್ಗ ಜಿಲ್ಲೆ | 10,874-00 |
| ಈ | ಶ್ರೀ ವಸಂತಕುಮಾರ್,<br>ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,<br>ತಾಲ್ಲೂಕು ಪಂಚಾಯತಿ, ಸಾಗರ,<br>ಶಿವಮೊಗ್ಗ ಜಿಲ್ಲೆ | 1,23,008-00 |
| ಉ | ಶ್ರೀಮತಿ ಲಕ್ಷ್ಮೀ ತಿಮ್ಮಪ್ಪ,<br>ಹಿಂದಿನ ಗ್ರಾ.ಪಂ. ಅಧ್ಯಕ್ಷರು,<br>ಸಾಗರ, ಶಿವಮೊಗ್ಗ ಜಿಲ್ಲೆ | 1,23,008-00 |

2. ಮೇಲ್ಕಂಡ ಆಪಾದಿತರು ದುರುಪಯೋಗದ ಮೊತ್ತವನ್ನು ತೀರುವಳಿ ಮಾಡಿರುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಾಗರ ಇವರು ದಿನಾಂಕ 08-7-2014 ರ ಪತ್ರದಲ್ಲಿ ನೀಡಿರುವ ವಿವರ ಈ ಕೆಳಕಂಡಂತಿದೆ:-

(i) ಶ್ರೀ ಸುರೇಶ್ ರಾವ್, ಹಿಂದಿನ ಕಾರ್ಯದರ್ಶಿ, ತುಮರಿ ಗ್ರಾಮ ಪಂಚಾಯತ್, (ಪ್ರಸ್ತುತ ನಿಧನ) ಇವರ ವಾರಸುದಾರರು ದಿವಂಗತರ ಮೇಲಿರುವ ರೂ. 1,23,008/-ಗಳನ್ನು ಬಡ್ಡಿ ಸಮೇತ ರೂ.1,41,459/-ಗಳನ್ನು ಪಾವತಿಸುವ ಮೂಲಕ ತೀರುವಳಿ ಮಾಡಿದ್ದಾರೆ.

(ii) ಶ್ರೀ ಸುಭಾಷ್ ನಾಯ್ಕ, ಕಿರಿಯ ಅಭಿಯಂತರರು, ಇವರು ರೂ.82,400/-ಗಳನ್ನು ಪಾವತಿಸಿದ್ದಾರೆ.

(iii) ಶ್ರೀ ಶಿವಮೂರ್ತಿ ಇವರು ರೂ.10,874/-ಗಳನ್ನು ಬಡ್ಡಿ ಸಮೇತ ರೂ.12,505/- ಪಾವತಿಸಿದ್ದಾರೆ.

(iv) ಶ್ರೀ ವಸಂತ್‌ಕುಮಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಾಗರ, ಶಿವಮೊಗ್ಗ ಜಿಲ್ಲೆ ರೂ.1,23,008/- ಗಳನ್ನು ಪಾವತಿಸಿಲ್ಲ.

(v) ಶ್ರೀಮತಿ ಲಕ್ಷ್ಮೀ ತಿಮ್ಮಪ್ಪ, ಹಿಂದಿನ ಅಧ್ಯಕ್ಷರು, ತುಮರಿ ಗ್ರಾಮ ಪಂಚಾಯತ್, ಸಾಗರ ತಾಲ್ಲೂಕು ಇವರು ರೂ.1,23,008/- ಗಳನ್ನು ಪಾವತಿ ಮಾಡಿಲ್ಲ.

ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತ ಅಧಿಕಾರಿಯಾದ ಶ್ರೀ ವಸಂತಕುಮಾರ್, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಾಗರ ಇವರ ವಿರುದ್ಧ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 67 ವಿಸೇಬಿ 2013, ಬೆಂಗಳೂರು ದಿ:22-02-2016 ರಲ್ಲಿ ಶಿಸ್ತು ಕ್ರಮ ಜರುಗಿಸಿ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿರುವುದರಿಂದ ಅವರ ವಿರುದ್ಧ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ.

ಪ್ರಕರಣದಲ್ಲಿ ಭಾಗಿಯಾಗಿರುವ ಮತ್ತೊಬ್ಬ ಆಪಾದಿತ ನೌಕರರಾದ ಶ್ರೀ ಸುರೇಶ್ ರಾವ್, ಅಂದಿನ ಕಾರ್ಯದರ್ಶಿ, ತುಮರಿ ಗ್ರಾಮ ಪಂಚಾಯತ್ ಇವರು ಮೃತಪಟ್ಟಿದ್ದು, ಇವರ ವಾರಸುದಾರರು ಈಗಾಗಲೇ ದುರುಪಯೋಗದ ಮೊತ್ತವನ್ನು ತೀರುವಳಿ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

ಶ್ರೀಮತಿ ಲಕ್ಷ್ಮೀ ತಿಮ್ಮಪ್ಪ, ಹಿಂದಿನ ಅಧ್ಯಕ್ಷರು, ತುಮರಿ ಗ್ರಾಮ ಪಂಚಾಯತ್, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರು ರೂ.1,23,008/- ಗಳನ್ನು ತೀರುವಳಿ ಮಾಡಿಲ್ಲದ ಕಾರಣ ಸದರಿ ಮೊತ್ತವನ್ನು ಬಡ್ಡಿ ಸಹಿತ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ-2 ರವರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರಾದ ಶ್ರೀ ಸುಭಾಷ್ ನಾಯ್ಕ, ಕಿರಿಯ ಅಭಿಯಂತರರು, ಪಂಚಾಯಿತಿ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ, ಶ್ರೀ ಶಿವಮೂರ್ತಿ, ಹಿಂದಿನ ವಲಯ ಅರಣ್ಯ ಅಧಿಕಾರಿ, ಸಾಗರ ಇವರುಗಳು ಪ್ರಶ್ನಿತ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಿರುವುದಲ್ಲದೇ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆಂದು, ಇವರುಗಳು ದುರುಪಯೋಗದ ಮೊತ್ತವನ್ನು ಭರಣ ಮಾಡಿರುವುದರಿಂದ ಆರೋಪ ಒಪ್ಪಿಕೊಂಡಂತಾಗಿದ್ದು ಅವರು ಎಸಗಿರುವ ದುರ್ನಡತೆಗೆ ಪೂರಕ ಪುರಾವೆಯಾಗಿದೆಯೆಂದು ಹಾಗೂ ಅವರುಗಳ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಅಂಶಗಳು ಕಂಡುಬರುವುದಿಲ್ಲವೆಂದು, ಸದರಿಯವರುಗಳು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯದಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಅವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-2ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಪ್ರಕರಣದಲ್ಲಿ ಭಾಗಿಯಾಗಿರುವ ಮೇಲ್ಕಂಡ ಇಬ್ಬರು ಆಪಾದಿತರು ಪ್ರಶ್ನಿತ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಿರುವುದು, ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು, ಅವರುಗಳು ದುರುಪಯೋಗದ ಮೊತ್ತವನ್ನು ಭರಣ ಮಾಡಿರುವುದರಿಂದ ಆರೋಪ ಒಪ್ಪಿಕೊಂಡಂತಾಗಿದ್ದು ಅವರು ಎಸಗಿರುವ ದುರ್ನಡತೆಗೆ ಪೂರಕ ಪುರಾವೆಯಾಗಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಇಬ್ಬರು ಆಪಾದಿತರ ಪೈಕಿ ಒಬ್ಬರಾದ ಶ್ರೀ ಶಿವಮೂರ್ತಿ, ಹಿಂದಿನ ವಲಯ ಅರಣ್ಯ ಅಧಿಕಾರಿ, ಸಾಗರ ಇವರು ಅರಣ್ಯ ಇಲಾಖೆಯ ಸೇವೆಗೆ ಸೇರಿದ ಅಧಿಕಾರಿಯಾಗಿದ್ದು, ಅರಣ್ಯ ಇಲಾಖೆಯವರು ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ದಿನಾಂಕ:28-12-2016 ರಂದು ಆದೇಶ ಹೊರಡಿಸಿರುತ್ತಾರೆ. ಮತ್ತೊಬ್ಬ ಆಪಾದಿತರಾದ ಶ್ರೀಮತಿ ಲಕ್ಷ್ಮೀ ತಿಮ್ಮಪ್ಪ, ಹಿಂದಿನ ಹಿಂದಿನ ಅಧ್ಯಕ್ಷರು, ತುಮರಿ ಗ್ರಾಮ ಪಂಚಾಯತ್, ಸಾಗರ ತಾಲ್ಲೂಕು ಇವರ ವಿರುದ್ಧ ಪಂಚಾಯತ್ ರಾಜ್ ಕಾಯ್ದೆ 1993 ರನ್ವಯ ಶಿಸ್ತು ಕ್ರಮ ಜರುಗಿಸಲು ಪ್ರಸ್ತಾವನೆಯನ್ನು ಗ್ರಾಮ ಪಂಚಾಯಿತಿ ಶಾಖೆಗೆ ದಿನಾಂಕ: 08.05.2017ರಂದು ವರ್ಗಾಯಿಸಲಾಗಿದೆ. ಇನ್ನುಳಿದಂತೆ ಶ್ರೀ ಸುಭಾಷ್ ನಾಯ್ಕ, ಕಿರಿಯ ಅಭಿಯಂತರರು, ಪಂಚಾಯಿತಿ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ, ಇವರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) (i) (ii) & (iii) ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವೆಂದು ಕಂಡುಬರುತ್ತದೆ. ಆದ್ದರಿಂದ, ಸದರಿಯವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಂತೆ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-2 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 267 ವಿಸೇಬಿ 2016 ಬೆಂಗಳೂರು,**
**ದಿನಾಂಕ.08.05.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಸುಭಾಷ್ ನಾಯ್ಕ, ಕಿರಿಯ ಅಭಿಯಂತರರು, ಪಂಚಾಯಿತಿ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತ-2ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

08/05/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ&ಸಿ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

- ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

- ಮಾನ್ಯ ಉಪ ಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.
- ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ(ಆಡಳಿತ), ಗ್ರಾ.ಅ.&ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.